# ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ
# ಅರಕಲಗೂಡು

ಸಿ.ಸಿ.ನಂಃ **94 / 2024**

ದಿನಾಂಕಃ **19/10/2024**

ಪಿರ್ಯಾದಿ ಃ – ಪುಟ್ಟಸ್ವಾಮಿ ಬಿನ್ ಚನ್ನಯ್ಯ
ಸುಮಾರು 55 ವರ್ಷ,
ಹೊನ್ನಗೌಡನಹಳ್ಳಿ ಗ್ರಾಮ,
ಕಸಬಾ ಹೋಬಳಿ,
ಅರಕಲಗೂಡು ತಾಲ್ಲೂಕು,
ಹಾಸನ ಜಿಲ್ಲೆ .

**ವಿರುದ್ಧ**

ಆರೋಪಿ ಃ ಟಿ.ಅರುಣ್ ಕುಮಾರ್ ಬಿನ್ ತಿಮ್ಮರಾಯಪ್ಪ

**ಆಪಾದನೆ**

ಶ್ರೀಮತಿ. ಚಂಪಾಶ್ರೀ ಆರ್. ಬಿ.ಎ.ಎಲ್. ಎಲ್ಎಲ್.ಬಿ., ಎಲ್.ಎಲ್.ಎಂ., ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಅರಕಲಗೂಡು ಆದ ನಾನು ಆರೋಪಿಯಾದ ನೀವುಃ

ಟಿ.ಅರುಣ್ ಕುಮಾರ್ ಬಿನ್ ತಿಮ್ಮರಾಯಪ್ಪ
ಸುಮಾರು 36 ವರ್ಷ,
ದ್ವಿತೀಯ ದರ್ಜೆ ಸಹಾಯಕ, ಪಿಡಬ್ಲ್ಯೂಡಿ ಇಲಾಖೆ,
ಹೆಚ್.ಎನ್.ಪುರ ರಸ್ತೆ, ಅರಕಲಗೂಡು,
ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ .

ನಿಮ್ಮ ಮೇಲೆ ಆಪಾದನೆ ಮಾಡುವುದೇನೆಂದರೆ

ಆರೋಪಿಯಾದ ನಿಮಗೂ ಮತ್ತು ಪಿರ್ಯಾದಿಗೂ ಪರಿಚಯವಿದ್ದು, ನೀವು ದಿನಾಂಕ 05.11.2023 ರಂದು ನಿಮ್ಮ ದರದು ನಿಮಿತ್ತ ಅಂದರೆ ಕೈ ಸಾಲವನ್ನು ತೀರಿಸಲು ಹಾಗೂ ಗೃಹ ಕೃತ್ಯದ ಖರ್ಚಿಗಾಗಿ ಪಿರ್ಯಾದಿಯಿಂದ ರೂಃ 3,60,000–00 ( ಮೂರು ಲಕ್ಷದ ಅರವತ್ತು

ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಸಾಲವಾಗಿ ಕೇಳಿದ್ದು, ಪಿರ್ಯಾದಿಯು ದೊಡ್ಡಮೊತ್ತವಾದ್ದರಿಂದ 3-4 ದಿನಗಳ ನಂತರ ಭೇಟಿ ಮಾಡುವಂತೆ ಹೇಳಿದ್ದರ ಮೇರೆಗೆ ಆರೋಪಿಯು ದಿನಾಂಕಃ 10/11/2023 ರಂದುಕ ಭೇಟಿ ಮಾಡಿ ಹಣ ಕೇಳಿದ್ದು, ಪಿರ್ಯಾದಿಯು ಒಪ್ಪಿ ನಿಮಗೆ ಅದೇ ದಿನ ರೂಃ 3,60,000-00 ಹಣವನ್ನು ನೀವು ಸಾಲವಾಗಿ ಪಡೆದಿರುತ್ತೀರಿ.

ಸದರಿ ಸಾಲವನ್ನು ಒಂದು ತಿಂಗಳಲ್ಲಿ ಮರುಪಾವತಿ ಮಾಡುವುದಾಗಿ ಹೇಳಿದ್ದು, ನೀವು ದಿನಾಂಕ 11/12/2023 ನಮೂದಿಸಿದ ಚೆಕ್ ನ್ನು ಪಿರ್ಯಾದಿಗೆ ಮರುಪಾವತಿಯ ಸಲುವಾಗಿ ನೀಡಿರುತ್ತೀರಿ. ಸದರಿ ಚೆಕ್ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಅರಕಲಗೂಡು ಶಾಖೆಯದ್ದಾಗಿದ್ದು, ಅದರ ಚೆಕ್ ಸಂಖ್ಯೆ 708023 ಮತ್ತು ಸದರಿ ಚೆಕ್ ನ್ನು ರೂ. 3,60,000-00 ಗಳಿಗೆ ನೀಡಲಾಗಿದೆ.

ಸದರಿ ಚೆಕ್ ನ್ನು ದಿನಾಂಕಃ 11/12/2023 ರಂದು ಅಥವಾ ನಂತರ ಬ್ಯಾಂಕಿಗೆ ಹಾಜರುಪಡಿಸಿ ಸಾಲದ ಹಣವನ್ನು ಪಡೆದುಕೊಳ್ಳುವಂತೆ ತಿಳಿಸಿದ್ದು, ಅದರಂತೆ ಪಿರ್ಯಾದಿಯ ಖಾತೆ ಇರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಅರಕಲಗೂಡು ಶಾಖೆಗೆ ನಗಧೀಕರಣಕ್ಕೆ ಹಾಜರುಪಡಿಸಿದಾಗ, ನಿಮ್ಮ ಖಾತೆಯಲ್ಲಿ 'ಸಾಕಷ್ಟು ಹಣವಿಲ್ಲ' ಎಂದು ದಿನಾಂಕಃ 11/12/2023 ರಂದು ಸದರಿ ಬ್ಯಾಂಕಿನವರು ತಿರಸ್ಕೃತಗೊಂಡ ಚೆಕ್ ಮತ್ತು ಹಿಂಬರಹವನ್ನು ವಾಪಸ್ಸು ನೀಡಿರುತ್ತಾರೆ.

ಸದರಿ ವಿಚಾರವನ್ನು ನಿಮಗೆ ಪಿರ್ಯಾದಿಯು ತಿಳಿಸಿದ್ದು ನೀವು ಉಡಾಪೆ ಉತ್ತರವನ್ನು ನೀಡಿದ್ದು, ದಿನಾಂಕ 13/12/2023 ರಂದು ನಿಮಗೆ ಪಿರ್ಯಾದಿಯು ತನ್ನ ವಕೀಲರ ಮುಖಾಂತರ ತಿಳುವಳಿಕೆ ಪತ್ರ ಕೊಟ್ಟು ಸಾಲದ ಹಣವನ್ನು ಮರುಪಾವತಿ ಮಾಡಲು ಕೋರಿರುತ್ತಾರೆ. ಸದರಿ ತಿಳುವಳಿಕೆ ಪತ್ರವು ನಿಮಗೆ ದಿನಾಂಕಃ 15/12/2023 ರಂದು ಖುದ್ದು ಜಾರಿಯಾಗಿದ್ದರೂ ಸಹ ಇಲ್ಲಿಯವರೆಗೂ ನೀವು ಪಿರ್ಯಾದಿಗೆ ಹಣವನ್ನು ಮರುಪಾವತಿ ಮಾಡಿರುವುದಿಲ್ಲ. ಆದ್ದರಿಂದ ನಿಮ್ಮ ಮೇಲೆ ವರ್ಗವಣೀಯ ಲಿಖಿತಗಳ ಅಧಿನಿಯಮ ಕಲಂ 138 ಮತ್ತು 142ರ ಅನ್ವಯ ಆಪಾದನೆ ಇದೆ.

ಸಿವಿಲ್ ಜಡ್ಜ್ ಮತ್ತು

ಜೆ.ಎಂ.ಎಫ್.ಸಿ. ನ್ಯಾಯಾಧೀಶರು

ಪ್ರಶ್ನೆ 1. ಈಗ ಓದಿ ಹೇಳಿದ ಆಪಾದನೆ ನಿಮಗೆ ತಿಳಿಯಿತೆ ?

ಉತ್ತರ

ಪ್ರಶ್ನೆ 2. ಮೇಲ್ಕಂಡ ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕೆ?

ಉತ್ತರ

ಪ್ರಶ್ನೆ 3. ನಿಮಗೆ ಏನಾದರೂ ಹೇಳುವುದಿದೆಯೇ ?

ಉತ್ತರ.

ಪ್ರಶ್ನೆ 4. ನಿಮ್ಮ ಪರವಾಗಿ ಸಾಕ್ಷಿದಾರರು ಇದ್ದಾರೆಯೇ ?

ಉತ್ತರ

( ಆರೋಪಿಗೆ ತಿಳಿಯುವ ಭಾಷೆಯಲ್ಲಿ ಆರೋಪವನ್ನು ಓದಿ ತಿಳಿಸಿ ಹೇಳಿ ಕೇಳಿ ಉತ್ತರವನ್ನು ಪಡೆಯಲಾಗಿದೆ ಎಂದು ಈ ಮೂಲಕ ದೃಢೀಕರಿಸಿದೆ.

ಸಿವಿಲ್ ನ್ಯಾಯಾಧೀಶರು,

ಮತ್ತು ಜೆ.ಎಂ.ಎಫ್.ಸಿ ಅರಕಲಗೂಡು